


## ಕಥೆ




# ಕೇಶವರೆಡ್ಡಿ ಹಂದ್ರಾಳ

ಕಲೆ: ವಿ.ಎಂ.ಮಂಜುನಾಥ್


ಕುಮಟಾ ರೈಲು ನಿಲ್ದಾಣದಲ್ಲಿ ರೈಲು ಇಳಿದಾಗ ಬೆಳಿಗ್ಗೆ ಎಂಟು ಗಂಟೆಯಾಗಿದ್ದರೂ ದಟ್ಟವಾದ ಮೋಡದೊಂದಿಗೆ ಜೋರಾಗಿ ಸುರಿಯುತ್ತಿದ್ದ ಮಳೆ ಕತ್ತಲೆಯ ವಾತಾವರಣವನ್ನು ಸೃಷ್ಟಿಸಿತ್ತು. ಕರಾವಳಿಯ ಮಳೆಗಾಲದ ಮಳೆಯ ಬಗ್ಗೆ ತಿಳಿದಿದ್ದರೂ ಅದರ ಪ್ರತ್ಯಕ್ಷ ಅನುಭವ ಈಗ ಎದುರಾಗಿತ್ತು. ಇಲ್ಲಿಗೆ ಬರುವ ನಿರ್ಧಾರ ಮಾಡಿದಾಗಲೇ ನನ್ನ ಸಹೋದ್ಯೋಗಿ ಮಿತ್ರ ನಿವೃತ್ತಿ ಹೊಂದಿ ಈಗ ತನ್ನ ಸ್ವಂತ ಊರಾದ ಸಿದ್ದಾಪುರದಲ್ಲಿ ನೆಲೆಸಿರುವ ಉಮೇಶ್ ನಾಯಕನಿಗೆ ಫೋನ್ ಮಾಡಿದಾಗ, 'ಓಹ್, ಸರಿ ಒಳ್ಳೆ ಮಳೆಗಾಲದಲ್ಲೇ ಹೊರಟಿದ್ದೀಯಲ್ಲ ಮಾರಾಯ. ಇಲ್ಲಿ ಬಿಡುವಿಲ್ಲದ ಜೋರು ಮಳೆಯಿದೆ. ನಮಗಾದರೆ ಇದು ಕಾಮನ್. ಬರುವಾಗ ಬಗಲಲ್ಲಿ ಒಂದು ಕೊಡೆಯನ್ನು ಸಿಗಿಸಿಕೊಂಡು ಬಾ. ಅಲ್ಲಿ ಕೆಲಸ ಮುಗಿದ ತಕ್ಷಣ ಒಂದು ಫೋನ್ ಮಾಡು. ನಾನು ಕುಮಟಾಕ್ಕೆ ಬಂದು ಪಿಕ್ ಮಾಡ್ತೇನೆ. ನೀನು ಸಿದ್ದಾಪುರದಲ್ಲಿ ಒಂದು ದಿನ ಉಳ್ಕಂಡು ಇಲ್ಲಿಂದಲೇ ಬೆಂಗಳೂರು ಬಸ್ ಹತ್ತಬಹುದು' ಎಂದು ಹೇಳಿದ್ದನ್ನು ನೆನಪಿನಲ್ಲಿ ಇಟ್ಟುಕೊಂಡು ಬೆಂಗಳೂರಿನಿಂದ ಬರುವಾಗ ಬ್ಯಾಗಿನಲ್ಲಿ ಒಂದು ಭದ್ರವಾದ ಕೊಡೆಯನ್ನು ಸೇರಿಸಿಕೊಂಡು ಬಂದಿದ್ದೆ. ಕೊಡೆಯನ್ನು ಬಿಚ್ಚಿ ರೈಲುನಿಲ್ದಾಣದ ಮುಖ್ಯದ್ವಾರಕ್ಕೆ ಬಂದಾಗ ರಸ್ತೆಗಳಲ್ಲಿ ಮನುಷ್ಯರ ಬದಲು ಕೊಡೆಗಳು ನಡೆದಾಡುತ್ತಿವೆಯೇನೋ ಅನ್ನಿಸಿತ್ತು. ಮುಂದೆಯೇ ನಿಂತಿದ್ದ ಆಟೋವೊಂದರ ಚಾಲಕನನ್ನು 'ಅಘನಾಶಿನಿಗೆ ಬರ್ತೀರಾ' ಎಂದು ಕೇಳಿದೆ. 'ಅಘನಾಶಿನಿ ಇಲ್ಲಿಗೆ ಹದಿನೈದು ಕಿಲೋಮೀಟರ್ ಆಗುವುದುಂಟು, ಅಲ್ಲಿಂದ ಬರುವಾಗ ಖಾಲಿ ಬರಲಿಕ್ಕುಂಟು. ಮುನ್ನೂರು ಕೊಡುವುದಾದರೆ ಅಡ್ಡಿಯಿಲ್ಲ' ಎಂದಿದ್ದ. ನನ್ನ ಪಕ್ಕದಲ್ಲಿ ಕೊಡೆ ಅರಳಿಸಿ ನಿಂತಿದ್ದ ನಡುವಯಸ್ಸು ಮೀರಿದ ಗಂಡಸೊಬ್ಬರು, 'ಅರೆ ಮಾರಾಯ್ರೆ ಬಸ್ಸ್ಟ್ಯಾಂಡಿನಿಂದ ಅಘನಾಶಿನಿಗೆ ಇಪ್ಪತ್ತು ನಿಮಿಷಕ್ಕೊಂದೊಂದು ಬಸ್ಸುಂಟು. ಇಪ್ಪತ್ತು ರೂಪಾಯಿಗೆ ಮುಕ್ಕಾಲು ಗಂಟೇಲಿ ಅಘನಾಶಿನಿಗೆ